# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೇಂದ್ರ ಪುರಸ್ಕೃತ "ಕರಾವಳಿ ಮೀನುಗಾರಿಕೆ-ಮೂಲಭೂತ ಸೌಕರ್ಯ ಹಾಗೂ ಹಿಡುವಳಿ ನಂತರದ ಚಟುವಟಿಕೆಗಳ ಅಭಿವೃದ್ಧಿ" ಯೋಜನೆಯಡಿ ಅನುದಾನ ಬಿಡುಗಡೆ.

ಓದಲಾಗಿದೆ:- (1) ಭಾರತ ಸರ್ಕಾರದ ಪತ್ರ ಸಂಖ್ಯೆ:33015-3-/2007-FY(H) Vol-1 ದಿನಾಂಕ:16-04-2010.

(2) ಭಾರತ ಸರ್ಕಾರದ ಪತ್ರ ಸಂಖ್ಯೆ:12014-11/2010-FY(T-1) ದಿನಾಂಕ:18-01-2011.

(3) ಜಮಾ ದೃಢೀಕರಣ ಪತ್ರ ಸಂಖ್ಯೆ:ಎಫ್‌ಡಿ/13/ಬಿಜಿಎಲ್/2009 ದಿನಾಂಕ:21-01-2011.

(4) ಪತ್ರ ಸಂಖ್ಯೆ:ಪಂಪಾಯೋ/18/2010-11 ದಿನಾಂಕ:31-01-2011.

******

## ಪ್ರಸ್ತಾವನೆ:

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಪತ್ರದಲ್ಲಿ ಕೇಂದ್ರ ಪುರಸ್ಕೃತ "ಕರಾವಳಿ ಮೀನುಗಾರಿಕೆ-ಮೂಲಭೂತ ಸೌಕರ್ಯ ಹಾಗೂ ಹಿಡುವಳಿ ನಂತರದ ಚಟುವಟಿಕೆಗಳ ಅಭಿವೃದ್ಧಿ" ಯೋಜನೆಯನ್ನು 2010-11ನೇ ಸಾಲಿಗೆ ಮುಂದುವರಿಸಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಸದರಿ ಯೋಜನೆಯಡಿ ಸುಧಾರಿತ ಮಾದರಿಯ Intermediate Craftಗಳ ನಿರ್ಮಾಣಕ್ಕಾಗಿ ಭಾರತ ಸರ್ಕಾರವು ಘಟಕ ವೆಚ್ಚದ ಪ್ರತಿಶತ 10ರಷ್ಟು ಅದರೆ ಗರಿಷ್ಠ ರೂ.6.00 ಲಕ್ಷಗಳ ಸಹಾಯಧನ ನೀಡುತ್ತದೆ.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಭಾರತ ಸರ್ಕಾರದ ಪತ್ರದಲ್ಲಿ ಸುಧಾರಿತ ಮಾದರಿಯ ಎರಡು Intermediate Craft ಗಳನ್ನು ನಿರ್ಮಿಸಲು ಮಂಜೂರಾತಿ ನೀಡಿದ್ದು, ಮೊದಲನೇ ಕಂತಿನ ಸಹಾಯಧನವಾಗಿ ರೂ.6.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ಜಮಾ ದೃಢೀಕರಣ ಪತ್ರದಲ್ಲಿ, ಸದರಿ ಯೋಜನೆಗಾಗಿ ಕೇಂದ್ರ ಸರ್ಕಾರವು ಬಿಡುಗಡೆಗೊಳಿಸಿದ ರೂ.6.00 ಲಕ್ಷಗಳನ್ನು ರಾಜ್ಯ ಸರ್ಕಾರದ ಖಜಾನೆಗೆ ದಿನಾಂಕ:20-01-2011 ರಂದು ಜಮೆ ಆಗಿರುವ ಬಗ್ಗೆ ಆರ್ಥಿಕ ಇಲಾಖೆಯು ದೃಢೀಕರಿಸಿದೆ.

ಮೇಲೆ ಕ್ರಮಾಂಕ (4)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರದಲ್ಲಿ, ಶ್ರೀ ಪ್ರಶಾಂತ ಬಿನ್ ನಂದ ಕರ್ಕೇರ, ಬೋಳಾರ, ಮಂಗಳೂರು ಇವರಿಗೆ ರೂ.62,17,329-00ಗಳ ವೆಚ್ಚದಲ್ಲಿ ಹಾಗೂ ಶ್ರೀ ಹಿರಿಯಣ್ಣ ಟಿ.ಕಿದಿಯೂರು, ಕಿದಿಯೂರು, ಉಡುಪಿ ಇವರಿಗೆ ರೂ.61,01,950-00ಗಳ ವೆಚ್ಚದಲ್ಲಿ ಸುಧಾರಿತ ಮಾದರಿಯ Intermediate Craft ಗಳನ್ನು ನಿರ್ಮಿಸಲು ಮೊದಲನೇ ಕಂತಿನ ಸಹಾಯಧನ ತಲಾ ರೂ.3.00 ಲಕ್ಷಗಳಂತೆ ಒಟ್ಟು ರೂ.6.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಪಸಂಮೀ 119 ಮೀಇಂಯೋ 2010 ಬೆಂಗಳೂರು, ದಿನಾಂಕ:04-03-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕೇಂದ್ರ ಪುರಸ್ಕೃತ "ಕರಾವಳಿ ಮೀನುಗಾರಿಕೆ-ಮೂಲಭೂತ ಸೌಕರ್ಯ ಹಾಗೂ ಹಿಡುವಳಿ ನಂತರದ ಚಟುವಟಿಕೆಗಳ ಅಭಿವೃದ್ಧಿ" ಯೋಜನೆಯಡಿ ಸುಧಾರಿತ ಮಾದರಿಯ ಎರಡು Intermediate Craft ಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರವು 2010-11ನೇ ಸಾಲಿಗೆ ಬಿಡುಗಡೆಗೊಳಿಸಿರುವ ಮೊದಲನೇ ಕಂತಿನ ರೂ.6.00 ಲಕ್ಷ (ಆರು ಲಕ್ಷ ರೂಪಾಯಿಗಳು ಮಾತ್ರ)ಗಳ ಪೈಕಿ ಶ್ರೀ ಪ್ರಶಾಂತ ಬಿನ್ ನಂದ ಕರ್ಕೇರ, ಬೋಳಾರ, ಮಂಗಳೂರು ಇವರಿಗೆ ರೂ.3.00 ಲಕ್ಷ ಹಾಗೂ ಶ್ರೀ ಹರಿಯಣ್ಣ ಟಿ.ಕಿದಿಯೂರು, ಕಿದಿಯೂರು, ಉಡುಪಿ ಇವರಿಗೆ ರೂ.3.00 ಲಕ್ಷ ಹೀಗೆ ಒಟ್ಟು ರೂ.6.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

ಮೇಲ್ಕಂಡ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ-00-103-ಸಮುದ್ರ ಮೀನುಗಾರಿಕೆ-0-06-ಮೀನುಗಾರಿಕೆ ದೋಣಿಗಳು ಬಳಸುವ ಹೆಚ್.ಎಸ್.ಡಿ. ಮೇಲಿನ ಕೇಂದ್ರ ಅಬಕಾರಿ ತೆರಿಗೆಯನ್ನು ಮನ್ನಾ ಮಾಡುವುದು (ಯೋಜನೆ)" ಇದರಡಿ ಒದಗಿಸಿರುವ ರೂ.400.00 ಲಕ್ಷಗಳ ಅನುದಾನದಿಂದ ಭರಿಸತಕ್ಕದ್ದು.

ಸದರಿ ಮೊತ್ತವನ್ನು ಫಲಾನುಭವಿಗಳು ಸಲ್ಲಿಸುವ ಪೇಯೀಸ್ ರಸೀದಿಗೆ ಮೇಲು ರುಜು ಮಾಡಿ ದಕ್ಷಿಣ ಕನ್ನಡ ಜಿಲ್ಲಾ ಖಜಾನೆ, ಮಂಗಳೂರುನಿಂದ ಸೆಳೆದು ಪಾವತಿಸಲು ಅನುಮತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ/9/ಟಿಎಫ್‌ಪಿ/2004 ದಿನಾಂಕ:17-08-2004ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ನೀಡಿರುವ ವಿತ್ತಾಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಿ.ಎಂ.ರಾಜಣ್ಣ) 4/3
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಡಿ.ಎಂ. ರಾಜಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

4/3

ಇವರಿಗೆ

1) ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
4) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
5) ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4).
7) ಖಜಾನಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಖಜಾನೆ, ಮಂಗಳೂರು.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.